ರಾಜ್ಯ ಸರ್ಕಾರವು ಹೊರಡಿಸಿರುವುದಿಲ್ಲ. ಆದ್ದರಿಂದ ಇದನ್ನು ಸ್ಥಗಿತ ಗೊಳಿಸುವ ಬಗ್ಗೆ ಸರ್ಕಾರ ಅಧಿಸೂಚನೆಯನ್ನು ಹೊರಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಇಂತಹ ಯಾವುದೇ ಪ್ರಸಂಗ ಬಂದರೂ ಸಹಿತ ಅದಕ್ಕೆ ಅವಕಾಶವನ್ನು ಕೊಡುವುದಿಲ್ಲವೆನ್ನುವ ಬಗ್ಗೆ ಸ್ಪಷ್ಟ ಅಭಿಪ್ರಾಯ ಇರುವಾಗ ತಾವು ಯಾರೂ ಅನುಮಾನಪಡುವ ಅವಶ್ಯಕತೆ ಇಲ್ಲ ಮತ್ತು ಜನ ಭಯಭೀತರಾಗಬೇಕಾದ ಅವಶ್ಯಕತೆ ಇಲ್ಲ ಎನ್ನುವ ಬಗ್ಗೆ ತಮ್ಮ ಕ್ಷೇತ್ರದ ಜನರಿಗೆ ಹೇಳಬಹುದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರವನ್ನು ಕೊಟ್ಟಿರುವುದು ಹೀಗಿದೆ ಎಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ದೊಡ್ಡನಗೌಡ ಗುಂಡನಗೌಡ ಪಾಟೀಲ್‌ರವರೆ ತಾವು ಮಾತನಾಡಿ.

6. ವಿಷಯ : ಇಳಕಲ್ ನಗರವು ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಜವಳಿ ಕ್ಷೇತ್ರವಾಗಿ ಅಭಿವೃದ್ಧಿ ಹೊಂದಿರುವುದರಿಂದ ತಾಲ್ಲೂಕು ಕೇಂದ್ರವನ್ನಾಗಿ ರಚಿಸುವ ಬಗ್ಗೆ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) : ಇಳಕಲ್ ನಗರವು ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಜವಳಿ ಕ್ಷೇತ್ರವಾಗಿ ಅಭಿವೃದ್ಧಿ ಹೊಂದಿರುವುದರಿಂದ ತಾಲ್ಲೂಕು ಕೇಂದ್ರವನ್ನಾಗಿ ರಚಿಸುವ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು, (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರ) ಗಮನ ಸೆಳೆಯುತ್ತೇನೆ.

ನಮ್ಮ ತಾಲ್ಲೂಕಿನ ಇಳಕಲ್ ನಗರವು ಬಹಳ ದೊಡ್ಡ ಪಟ್ಟಣ ವಾಗಿದೆ. 2001ರ ಜನಸಂಖ್ಯೆಯ ಆಧಾರದ ಮೇಲೆ 51,000 ಜನಸಂಖ್ಯೆ ಇದ್ದಂತಹ ಒಂದು ಪಟ್ಟಣ ಇವತ್ತು 2011ರ ಜನಸಂಖ್ಯೆಯ ಆಧಾರದ ಮೇಲೆ ಸುಮಾರು 80,000 ಜನಸಂಖ್ಯೆವುಳ್ಳ ನಗರವಾಗಿದೆ. ಈ ನಗರದಲ್ಲಿ ಈಗಾಗಲೇ ಜಿಲ್ಲಾ ಕೇಂದ್ರದಲ್ಲಿ ಸ್ಥಾಪಿಸಬೇಕಾದಂತಹ.....

ಅಧ್ಯಕ್ಷರು : ಮಾನ್ಯ ಪಾಟೀಲ್‌ರವರೆ, ಮಾನ್ಯ ಸಚಿವರು ಉತ್ತರವನ್ನು ಹೇಳಲಿ. ಆಮೇಲೆ ತಾವು clarification ಕೇಳಿ. ಇಲ್ಲಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರಲ್ಲ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಟೀಲ್ : ಇಳಕಲ್ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಣೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಸಚಿವರು ಉತ್ತರವನ್ನು ಒದಗಿಸಿರುವುದಿಲ್ಲ.

ಅಧ್ಯಕ್ಷರು : ತಾವು clarification ಕೇಳಿ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) (ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಹುನಗುಂದ ಪಟ್ಟಣದಿಂದ 11 ಕಿ.ಮೀ. ಅಂತರದಲ್ಲಿರುವ ಹುನಗುಂದ ತಾಲ್ಲೂಕು ಇಳಕಲ್ ನಗರದಲ್ಲಿ 1980ರಲ್ಲಿ ಬಸ್ ಡಿಪೋ ಪ್ರಾರಂಭಿಸಲಾಗಿತ್ತು. ಸದರಿ ಘಟಕದಿಂದ ಹುನಗುಂದ ತಾಲ್ಲೂಕಿನ.....

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದು ಆ ಉತ್ತರವಲ್ಲಾ ಸಾರ್.

ಶ್ರೀ ಸಿ.ಎಂ. ಉದಾಸಿ : ಇದು ಬೇರೆಯೇ?

ಅಧ್ಯಕ್ಷರು : ಮಾನ್ಯ ಸಚಿವರೆ, ಗಮನಸೆಳೆಯುವ ಸೂಚನೆಯ ಸಂಖ್ಯೆ 39ರ ಬಗ್ಗೆ ತಾವು ಹೇಳುತ್ತಿದ್ದೀರಿ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ : ನಾನು ಕ್ರಮ ಸಂಖ್ಯೆ:25 ಅನ್ನು ಕೇಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ : ತಾವು ಕ್ರ.ಸಂಖ್ಯೆ: 25 ಅನ್ನು ಕೇಳುತ್ತಿದ್ದೀರಾ? ನನ್ನ ಹತ್ತಿರ ಕ್ರಮ.ಸಂಖ್ಯೆ: 39 ಮಾತ್ರ ಇದೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಗಳಿಂದ ಗಮನಸೆಳೆಯುವ ಸೂಚನೆ 25ಕ್ಕೆ ಉತ್ತರ ಬಂದಿಲ್ಲ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ : ಈ ರೀತಿಯಾದರೆ ಹೇಗೆ ಮಾನ್ಯ ಅಧ್ಯಕ್ಷರೆ? ಒಂದು ಗಮನಸೆಳೆಯುವ ಸೂಚನೆಗೂ ಕೂಡ

ಉತ್ತರ ಕೊಡುವಂತಹ ಸೌಜನ್ಯತೆಯನ್ನು ತೋರದೆ ಇದ್ದರೆ ನಾವು ಏನು ಮಾಡಬೇಕು ಹೇಳಿ.

ಶ್ರೀ ಸಿ.ಎಂ.ಉದಾಸಿ : ಮಾನ್ಯ ಉಪಮುಖ್ಯಮಂತ್ರಿಯವರಿಗೆ ಹೇಳುತ್ತೇನೆ ಬಿಡಿ. ತಾವು ಇಳಕಲ್ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಕೇಳುತ್ತಿದ್ದೀರಲ್ಲವೇ? ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವಂತಹ ಕೆಲಸವನ್ನು ಮಾಡುತ್ತೇನೆ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ : ಇಳಕಲ್ ನಗರವನ್ನು ತಾವು ತಾಲ್ಲೂಕು ಕೇಂದ್ರವನ್ನಾಗಿ ಘೋಷಣೆ ಮಾಡುತ್ತೇವೆಂದು ಹೇಳಿ.

ಶ್ರೀ ಸಿ.ಎಂ. ಉದಾಸಿ : ನಾನು ಅವರಿಗೆ ಹೇಳುತ್ತೇನೆ.

ಅಧ್ಯಕ್ಷರು : ಆಯಿತು.

7. ವಿಷಯ : ಹುನಗುಂದದಲ್ಲಿ ಬಸ್ ಡಿಪೋ ನಿರ್ಮಿಸುವ ಬಗ್ಗೆ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) : ಮಾನ್ಯ ಅಧ್ಯಕ್ಷರೆ, ಹುನಗುಂದ ನಗರವು ತಾಲ್ಲೂಕು ಕೇಂದ್ರವಾಗಿದ್ದು ಔದ್ಯೋಗಿಕವಾಗಿ ಅಭಿವೃದ್ಧಿ ಹೊಂದಿ ಹಲವಾರು ಸಂಪರ್ಕ ಜಾಲವನ್ನು ಹೊಂದಿರುವುದರಿಂದ ಹುನಗುಂದದಲ್ಲಿ ಬಸ್ ಡಿಪೋ ನಿರ್ಮಿಸುವ ಬಗ್ಗೆ ಮಾನ್ಯ ಉಪಮುಖ್ಯ ಮಂತ್ರಿಗಳ (ಗೃಹ ಮತ್ತು ಸಾರಿಗೆ ಸಚಿವರು) ಗಮನ ಸೆಳೆಯುತ್ತೇನೆ. ಹುನಗುಂದದಲ್ಲಿ 1980ರ ದಶಕದಲ್ಲಿ ಬಸ್ ಡಿಪೋವನ್ನು ನಿರ್ಮಾಣ ಮಾಡುವುದರ ಬಗ್ಗೆ ಹೋರಾಟ ಮಾಡಿ ಅವತ್ತಿನದಿವಸ ಗೋಲಿಬಾರ್ ಆಗಿ 3 ಜನರು ಸತ್ತಿದ್ದಾರೆ. ಆದ್ದರಿಂದ ಹುನಗುಂದ ತಾಲ್ಲೂಕಿನಲ್ಲಿ ಬಸ್ ಡಿಪೋ ನಿರ್ಮಾಣ ಮಾಡಬೇಕೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) (ಮಾನ್ಯ ಉಪಮುಖ್ಯಮಂತ್ರಿಗಳು, ಗೃಹ ಮತ್ತು ಸಾರಿಗೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಹುನಗುಂದ ಪಟ್ಟಣದಿಂದ ಸುಮಾರು 11 ಕಿ.ಮೀ. ಅಂತರದಲ್ಲಿ ಹುನಗುಂದ ತಾಲ್ಲೂಕಿನ ಇಳಕಲ್ ನಗರದಲ್ಲಿ 1980ರಲ್ಲಿ ಬಸ್ ಡಿಪೋ ಪ್ರಾರಂಭಿಸಲಾಗಿದ್ದು ಸದರಿ ಘಟಕದಿಂದ ಹುನಗುಂದ ತಾಲ್ಲೂಕಿಗೆ ಸಾರಿಗೆ